# ಪ್ರೇಮವೆನಲು ಹಾಸ್ಯವೆ?

ಆತಂಕವೋ, ಸಂಖ್ಯಾ ದೃಷ್ಟಿಯಿಂದ ಕಡಿಮೆಯಿದ್ದರೂ ಕವಯಿತ್ರಿಯರು ಪ್ರಣಯಗೀತೆಗಳನ್ನು ಬರೆದದ್ದು ಸ್ವಲ್ಪವೇ. ಆದರೆ ಈ ಕಾಲಘಟ್ಟದಲ್ಲಿ ಸಾಮಾಜಿಕ ಜಾಲತಾಣಗಳು ಆ ಪೂರ್ವಗ್ರಹಪೀಡಿತ ವಾತಾವರಣವನ್ನು ಕೊಂಚವಾದರೂ ಸಡಿಲಗೊಳಿಸಿ ಬರೆಯಲು, ಅಭಿವ್ಯಕ್ತಿಸಲು ಮುಕ್ತ ವಾತಾವರಣ ನಿರ್ಮಿಸಿರುವುದು, ಕವಯಿತ್ರಿಯರೂ ನಿರ್ಭೀಡೆಯಿಂದ ಬರೆಯುತ್ತಿರುವುದು ಸಮಾಧಾನಕರ ಸಂಗತಿ.

ಹಾಗೆ ಬರೆವ ಕೆಲವು ಸಮಕಾಲೀನ ಕವಿ ಕವಯಿತ್ರಿಯರ ಕೆಲವು ಪ್ರೇಮೋಕ್ತಿಗಳು ಹೀಗಿವೆ– ದೀಪ್ತಿ ಭದ್ರಾವತಿ ಅವರ 'ಮತ್ಸರವಿಲ್ಲ ಗೆಳೆಯಾ, ಬಣ್ಣದ ಅಲೆಗಳ ರಥವೇರಿ ಮೈಮರೆತು ಸುತ್ತಾಡು', ಎನ್. ಪಾರ್ವತಿ ಅವರ 'ನಿನ್ನ ಕಣ್ಣ ನೋಟ ನನ್ನಿರುವನ್ನೇಕೆ ಮರೆಸಬೇಕು? ನಾವಿಬ್ಬರೂ ಜೊತೆಗಿರಲಾಗದ ಲೋಕಕ್ಕೆ ನಾನೇಕೆ ಬರಬೇಕು', ಸುಧಾ ಆಡುಕಳ ಅವರ 'ಅಗಲಲಾರದ ಬಂಧಕ್ಕೆ ನೀನೆಂದು ಹೆಸರು, ನಿರಂತರ ಕಾಯುವಿಕೆಗೆ ನಾನೆಂದು ಹೆಸರು', ಶ್ರೀದೇವಿ ಅವರ, 'ಖಾಸಗೀ ಕ್ಷಣಗಳಲ್ಲೂ ನಿನ್ನ ನೆನಪಾಗಿ ತಲ್ಲಣಿಸುವಂತೆ ಮಾಡುವ ನಿನಗೆ ವಿಲಕ್ಷಣ ಖುಷಿ' ವಿಜಯಶ್ರೀ ಅವರ, 'ತುಟಿಗಳಿಂದ ಕರೆದಿದ್ದರೆ ನಿರಾಕರಿಸಿ ನಡೆಯುತ್ತಿದ್ದೆ. ಆತ್ಮದ ತೋಳುಗಳ ಚಾಚಿರುವೆ', ಆನಂದ ಋಗ್ವೇದಿ ಅವರ, 'ನಿನ್ನ ಕಣ್ಣ ಸುತ್ತಣ ಕಪ್ಪು, ಹಣತೆ ಕೆಳಗಿನ ನೆರಳು' ರಾಜಕುಮಾರ ಮಡಿವಾಳರ ಅವರ, 'ಇರಿತಾವ ಚಳಿ ಮುಸೆದ ಗಾಳಿ ಹೊಕ್ಕು, ಎದೆ ಎದೆಯಿಂದೆಗೆ! ಕರಿತಾವ ಬೇಟೆಗೆ ಬೇಟೆ!' ಗಿರೀಶ ಜಕಾಪುರೆ ಅವರ, 'ನೀನು ಇಲ್ಲವೆಂದು ಇಲ್ಲಿ ಯಾವುದೂ ನಿಂತಿಲ್ಲ ಎಂದಿನಂತಿದೆ ಎಲ್ಲವೂ, ಏನೇನೂ ಬದಲಾಗಿಲ್ಲ! ನಿನ್ನ ವಿರಹದಲಿ ನಾನು ಸತ್ತಿಲ್ಲವೆಂಬುದು ನಿಜ, ಆದರೆ ಈ ಬದುಕು ಸಾವಿಗಿಂತ ಕಡಿಮೆಯೇನಿಲ್ಲ!...' ಹೀಗೆ ಇನ್ನೂ ಪುಳಕಕ್ಕೊಡ್ಡುವ ರಚನೆಗಳು ಸೃಷ್ಟಿಯಾಗುತ್ತಿವೆ.

ಹಾಗಂತ ಯಾವಾಗಲೂ ಅನುರಕ್ತಿಭರಿತ ಕಾವ್ಯಗಳನ್ನೇ ಬರೆಯುತ್ತಾ ಕುಳಿತರೆ ಕವಿಯ ಚಿಂತನಶೀಲ ಓಟಕ್ಕೆ ಧಕ್ಕೆಯಾಗುತ್ತದೆ. ವಿಚಾರವಂತಿಕೆ ಸಾಯುತ್ತದೆ. ಆಗಾಗ ತರ್ಕಭರಿತ ರಚನೆಗಳ, ಸಾಮಾಜಿಕ ಕಳಕಳಿಯುಳ್ಳ, ದನಿಯಿಲ್ಲದವರ ದನಿಯಾಗುವ, ಸಾಂತ್ವನ ಕೊಡುವ, ಸಮಕಾಲೀನ ಅನ್ಯಾಯಗಳಿಗೆ ಸ್ಪಂದಿಸುವ ಸಾಲುಗಳ ಗಟ್ಟಿಧ್ವನಿ ಆಯಾ ಕಾಲದ ಬಹಳ ಅಗತ್ಯ ಅಂಶ. ಹೀಗಾಗಿಯೇ ತಮ್ಮನ್ನು ಲಘುವಾಗಿ ಪರಿಗಣಿಸಬಹುದು, ತಮ್ಮ ಬರಹಕ್ಕೆ ಬೆಲೆಯಿಲ್ಲದಂತಾಗಬಹುದು, ತಾವು ಸಮಾಜ ಘಾತುಕರಾಗಬಹುದು ಎಂಬ ಆತಂಕ ಹಾಗೂ ಕವಿಯೆಂದರೆ ಸಹಜ ಸಾಮಾಜಿಕ ಕಾಳಜಿ ಹೊಂದಿರುವಂತಹ ವ್ಯಕ್ತಿತ್ವ ಎಂಬಂತಹ ಆಲೋಚನೆಗಳಿಂದ ಕವಿಗಳು ಪ್ರೀತಿಸಾಲುಗಳಿಗೆ ಶರಣಾಗಲು ಹಿಂಜರಿಯುವಂತಾಗಿದೆ.

ಹಾಗೆಯೇ ತುಂಟತನದ, ಮುನಿದವರನ್ನು ಸಂತೈಸುವ, ವಿರಹ, ಕಾಮ, ಆಕ್ಷೇಪ, ರಮ್ಯತೆ, ಪ್ರೇಮಿಯ ಚೆಲುವನ್ನ ಬಣ್ಣಿಸುವ, ಬವಣೆ ಮರೆಸಿ ಬಾಂಧವ್ಯ ಉಕ್ಕಿಸುವ, ಬೇಗುದಿ ತಣಿಸುವ, ಬದುಕಿನ ವಿಸ್ತಾರವನ್ನ ಪರಿಚಯಿಸುವ ಕವನಗಳು, ಬರಹಗಳು ಬಾರದಿದ್ದರೆ, ಎದೆಯ ತೇವದ ರಾಗಗಳು ಸೃಷ್ಟಿಯಾಗದಿದ್ದರೆ ಭಾವ ಬರಡಾಗಿ ಯುವ ಚೇತನಗಳು ಅಕಾಲ ಪ್ರೌಢರಾಗಿ ಚಿಕ್ಕಪುಟ್ಟ ವಯಸ್ಸಿನಲ್ಲೇ ಬದುಕಿನ ಸೊಗಡನ್ನ, ಸೊಗಸನ್ನ ಕಳೆದುಕೊಳ್ಳಬಹುದು.

ಜಾಗತೀಕರಣ ಸೃಷ್ಟಿಸುವ ಬಹು ದೊಡ್ಡ ಸವಾಲನ್ನ ಎದುರಿಸಲು, ಹುಸಿ ಪೊಳ್ಳುಗಳನ್ನು ನಿವಾರಿಸಲು ಗಂಭೀರ ಪದ್ಯಗಳ ನಡುವೆ, ಮರುಭೂಮಿಯ ಓಯಸಿಸ್ಸಿನಂತೆ ಪ್ರೇಮಕಾವ್ಯಗಳು ಉಕ್ಕಬೇಕಿದೆ. ಪ್ರೇಮರಾಹಿತ್ಯ ಸ್ಥಿತಿಯೊಂದು ಅತ್ಯಂತ ದುರ್ಭರ.

ಸಾಹಿತ್ಯ, ರಂಗಭೂಮಿ, ವಿಜ್ಞಾನ, ಸಂಘಟನೆ, ಪ್ರವಾಸ ಪ್ರಮುಖ ಆಸಕ್ತಿಗಳು. ಶಿಕ್ಷಕಿಯಾಗಿ ಸೇವೆ ಸಲ್ಲಿಕೆ. ಮೂರು ಪುಸ್ತಕಗಳು ಪ್ರಕಟವಾಗಿವೆ.